



# ಎಲ್ಲೂ ಸಿಗದ ಮುಲಾಮಿನ ಹುಡುಕಾಟದಲಿ

ಒಳಗೇ ಇರಿಯುವ ಎದೆಯ ನೋವನು ಹೇಗೆ ಮರೆಯಲಿ ಗೆಳೆಯ
ಎಂದೂ ಮಾಯದ ಗಾಯಕೆ ಮುಲಾಮು ಯಾರ ಕೇಳಲಿ ಗೆಳೆಯ

ಉರಿ ಬಿಸಿಲ ಧಗೆ ಸುಡಲು ನೆತ್ತಿ ನಿಲಬಹುದು ಗಿಡದ ನೆರಳಿಗೆ
ನೂರು ಸಮುದ್ರಗಳು ತಣಿಸದಿರೆ ಆರದ ಉರಿಯ ಏನ ತರಲಿ ಗೆಳೆಯ

ಬಳಲಿ ಬಾಯಾರಿ ಊರೂರು ಅಲೆದು ಸೇರಬಹುದು ಊರ ಅಗಸೆ
ಎನಿತು ದೂರ ನಡೆದರೂ ಕಾಣದ ಊರನು ಎಲ್ಲಿ ಹುಡುಕಲಿ ಗೆಳೆಯ

ಹಸಿದ ಹೊಟ್ಟೆಗೆ ಸಿಕ್ಕೀತು ಹಿಡಿ ಹಿಟ್ಟು ಬೇಡಿದರೆ ಎಲ್ಲಿಯಾದರೂ
ಕಣ್ಣೆರದ ಮನಸುಗಳಿಗೆ ಬಣ್ಣದ ಕನಸುಗಳ ಹೇಗೆ ತುಂಬಲಿ ಗೆಳೆಯ



ಮರಳುಗಾಡಿನ ನಡುವೆ ಜೀವ ಸೆಲೆಯಾಗಿ ಸಿಗಬಹುದು ಓಯಸಿಸ್ಸು
'ಪ್ರೀತಿ' ಹುಡುಕಿ ನಡೆದ ಹೃದಯ ಎರೆಬಿರುಕಿನಂತಾಗಿದೆ ಏನೆಂದು ಸಂತೈಸಲಿ ಗೆಳೆಯ

**● ವಿ. ಹರಿನಾಥ ಬಾಬು ಸಿರುಗುಪ್ಪ**

ಕಲೆ: ವಾಗೀಶ ಹೆಗಡೆ